ಇಂದ,

ಪೊಲೀಸ್ ನಿರೀಕ್ಷಕರು,
ಪೂರ್ವ ಪೊಲೀಸ್ ಠಾಣೆ,
ಕದ್ರಿ, ಮಂಗಳೂರು.

ಇಗೆ,

ಪ್ರಾಂಶುಪಾಲರು
ಪದವು ಪಿಯು ಕಾಲೇಜ್
ಪದವು, ನಂತೂರು.
ಮಂಗಳೂರು.

ಮಾನ್ಯರೇ,

ವಿಷಯ: ಕಾಲೇಜಿನಲ್ಲಿ ಎರಡು ಕೊಠಡಿಯನ್ನು (ಹಾಲ್) ಕಾದಿರಿಸುವ ಬಗ್ಗೆ.

*************

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 02-05-2017 ರಂದು ಮುಸ್ಲಿಂ ಸಂಘಟನೆಗಳ ಒಕ್ಕೂಟ ಇವರ ವತಿಯಿಂದ ಮಂಗಳೂರು ಚಲೋ ಕಾರ್ಯಕ್ರಮ ನೆಹರೂ ಮೈದಾನದಲ್ಲಿ ನಡೆಯಲಿದ್ದು, ಈ ಸಂಬಂಧ ಹೊರ ಜಿಲ್ಲೆಗಳಿಂದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಬಂದೋಬಸ್ತ್ ಕರ್ತವ್ಯಕ್ಕೆ ಆಗಮಿಸಲಿರುವುದರಿಂದ ಅವರಿಗೆ ವಾಸ್ತವ್ಯಕ್ಕಾಗಿ ದಿನಾಂಕ: 01-05-2017 ರಿಂದ್ದ ದಿನಾಂಕ 02-05-2017 ರವರೆಗೆ 2 ದಿನಗಳ ಕಾಲ ತಮ್ಮ ಶಾಲೆಯಲ್ಲಿ ಎರಡು ಕೊಠಡಿಯನ್ನು ಕಾಯ್ದಿರಿಸಲು ಈ ಮೂಲಕ ಕೋರಲಾಗಿದೆ.

ತಿಮ್ಮಪ್ಪ ಬಿ.ಸಿ.
Station House Officer
East Police Station
Kadri Hills, Mangalore

ಸ್ಥಳ: ಮಂ.ಪೂರ್ವ ಪೊಲೀಸ್ ಠಾಣೆ

ದಿನಾಂಕ: 30-04-2017

Permission granted.

01/05/2017

Principal
Padua College of Commerce and Management
Nanthur, Mangalore - 575 004

Scanned by CamScanner

ಇವರಿಗೆ;

ಪ್ರಾಂಶುಪಾಲರು

ಪದುವಾ ಪಿ.ಯು.ಕಾಲೇಜು

ಪದವು ಮಂಗಳೂರು

ಇವರಿಂದ;

ಪೊಲೀಸ್ ನಿರೀಕ್ಷಕರು

ಮಂಗಳೂರು ಪೂರ್ವ ಪೊಲೀಸ್ ಠಾಣೆ

ಕದ್ರಿ ಹಿಲ್ಸ್ ಮಂಗಳೂರು

ಮಾನ್ಯರೇ;

ವಿಷಯ: ತಮ್ಮ ಕಾಲೇಜಿನ ಸಭಾಂಗಣವನ್ನು ಒದಗಿಸಿ ಕೊಡುವ ಬಗ್ಗೆ.

******

ಈ ಮೇಲಿನ ವಿಷಯದ ಬಗ್ಗೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ದಿನಾಂಕ: 21-06-2016 ರಂದು ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಮಂಗಳೂರು ಪೂರ್ವ ಪೊಲೀಸ್ ಠಾಣಾ ಅಧಿಕಾರಿ ಮತ್ತು ಸಿಬ್ಬಂದಿಗಳು ಯೋಗಾಭ್ಯಸದ ತರಬೇತಿ ಪಡೆಯಲಿರುವುದರಿಂದ ತಮ್ಮ ಕಾಲೇಜಿನ ಸಭಾಂಗಣವನ್ನು ದಿನಾಂಕ: 21-06-2016 ರಂದು ಬೆಳಗ್ಗೆ 05-00 ರಿಂದ 06-00 ಗಂಟೆಯ ವರೆಗೆ ಒದಗಿಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ

ತಮ್ಮ ವಿಶ್ವಾಸಿ

ಮಂ.ಪೂರ್ವ ಪೊಲೀಸ್ ಠಾಣೆ

ದಿನಾಂಕ: 20-06-2016

Station House Officer
East Police Station
Kadri Hills, Mangalore

Scanned by CamScanner

KARNATAKA STATE POLICE

ಪೋಲೀಸ್ ಇಲಾಖೆ

ಮಂಗಳೂರು ಪೂರ್ವ ಪೊಲೀಸ್ ಠಾಣೆ.
ದಿನಾಂಕ 11-03-2019

ಇವರಿಗೆ;

ಸಂಚಾಲಕರು
ಪದವು ಶಿಕ್ಷಣ ಸಂಸ್ಥೆ
ಪದವು ನಂತೂರು, ಮಂಗಳೂರು

ಇವರಿಂದ;

ಪೊಲೀಸ್ ನಿರೀಕ್ಷಕರು
ಮಂಗಳೂರು ಪೂರ್ವ ಪೊಲೀಸ್ ಠಾಣೆ
ಕದ್ರಿ ಹಿಲ್ಸ್ ಮಂಗಳೂರು

ಮಾನ್ಯರೇ;

ವಿಷಯ: ಲೋಕಸಭಾ ಚುನಾವಣಾ ಪ್ರಯುಕ್ತ ಬಂದೋಬಸ್ತ್ ಕರ್ತವ್ಯಕ್ಕೆ ಬರುವ ಭದ್ರತಾ ಸಿಬ್ಬಂದಿಗಳಿಗೆ ತಮ್ಮ ಪದವು ಮೈದಾನದಲ್ಲಿರುವ ಪೆವಿಲಿಯನ್ ಕಟ್ಟಡವನ್ನು ಒದಗಿಸಿ ಕೊಡುವ ಬಗ್ಗೆ.

**********

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಮುಂಬರುವ ಲೋಕಸಭಾ ಚುನಾವಣಾ–2019 ಪ್ರಯುಕ್ತ ಬಂದೋಬಸ್ತ್ ಕರ್ತವ್ಯಕ್ಕೆ ಬರುವ ಕೇಂದ್ರ ಭದ್ರತಾ ಪಡೆಯ ಅಧಿಕಾರಿ ಸಿಬ್ಬಂದಿಗಳಿಗೆ ವಾಸ್ತವ್ಯಕ್ಕೆ ತಮ್ಮ ಸಂಸ್ಥೆಯ ಪದವು ಮೈದಾನದಲ್ಲಿರುವ ಪೆವಿಲಿಯನ್ ಕಟ್ಟಡವನ್ನು ಒದಗಿಸಿಕೊಡುವರೇ ಮತ್ತು ವಾಸ್ತವ್ಯದ ದಿನಗಳಲ್ಲಿ ನೀರು ವಿದ್ಯುತ್ ಪೂರೈಕೆಯ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ

Police Inspector
East (Kadri) Police Station
Mangalore City

Scanned by CamScanner

ಪೊಲೀಸ್ ಇಲಾಖೆ

ಮಂಗಳೂರು ಪೂರ್ವ ಪೊಲೀಸ್ ಠಾಣೆ.
ದಿನಾಂಕ 01-03-2019

ಇವರಿಗೆ;

ಸಂಚಾಲಕರು
ಪಾದುವ ಕಾಲೇಜು
ಮಂಗಳೂರು

ಇವರಿಂದ;

ಪೊಲೀಸ್ ನಿರೀಕ್ಷಕರು
ಮಂಗಳೂರು ಪೂರ್ವ ಪೊಲೀಸ್ ಠಾಣೆ
ಕದ್ರಿ ಹಿಲ್ಸ್ ಮಂಗಳೂರು

ಮಾನ್ಯರೇ;

ವಿಷಯ: ಲೋಕಸಭಾ ಚುನಾವಣಾ ಪ್ರಯುಕ್ತ ಬಂದೋಬಸ್ತ್ ಕರ್ತವ್ಯಕ್ಕೆ ಬರುವ ಭದ್ರತಾ ಸಿಬ್ಬಂದಿಗಳಿಗೆ ತಮ್ಮ ಕೊಠಡಿ ಮತ್ತು ಹಾಲ್‌ನ್ನು ಒದಗಿಸಿ ಕೊಡುವ ಬಗ್ಗೆ.

**********

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಮುಂಬರುವ ಲೋಕಸಭಾ ಚುನಾವಣಾ ಪ್ರಯುಕ್ತ ಬಂದೋಬಸ್ತ್ ಕರ್ತವ್ಯಕ್ಕೆ ಬರುವ ಕೇಂದ್ರ ಭದ್ರತಾ ಪಡೆಯ ಅಧಿಕಾರಿ ಸಿಬ್ಬಂದಿಗಳಿಗೆ ವಾಸ್ತವ್ಯಕ್ಕೆ ತಮ್ಮ ಸಂಸ್ಥೆಯ ಕೊಠಡಿ ಮತ್ತು ಹಾಲ್‌ನ್ನು ಒದಗಿಸಿಕೊಡುವರೇ ಮತ್ತು ವಾಸ್ತವ್ಯದ ದಿನಗಳಲ್ಲಿ ನೀರು ಮತ್ತು ವಿದ್ಯುತ್ ಪೂರೈಕೆಯ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

MARUTI G. NAYAK
Police Inspector
M'lore East Police Station Kadri
Mangaluru City

Scanned by CamScanner

Govt. of Karnataka

**Office of the Deputy Commissioner, Dakshina Kannada District, Mangalore**

No.ELN (1) CR.1/2017-18 Date: 03.05.2018.

## ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆ 2018 – **ಚುನಾವಣೆಯನ್ನು ಮುಕ್ತ ಹಾಗೂ ಶಾಂತಿಯುತ ನಡೆಸುವ ಬಗ್ಗೆ ಜಿಲ್ಲೆಗೆ ನಿಯೋಜಿತ ಕೇಂದ್ರೀಯ ಪಡೆಗಳ ತಾತ್ಕಾಲಿಕ ವಾಸ್ತವ್ಯಕ್ಕಾಗಿ ಕಟ್ಟಡ ಅಧಿಗ್ರಹಣ ಆದೇಶ.**

ಉಲ್ಲೇಖ: 1. ಭಾರತ ಚುನಾವಣಾ ಆಯೋಗದ ಪತ್ರಿಕಾ ಪ್ರಕಟಣೆ ನಂ: ಇಸಿಐ/ಪಿಎನ್/22/2018, ದಿನಾಂಕ: 27.03.2018.

2. ಪೊಲೀಸ್ ಆಯುಕ್ತರು, ಮಂಗಳೂರು ಇವರ ಪತ್ರ ಸಂಖ್ಯೆ : 193/ಸಿಎಸ್‌ಬಿ/ಸಿಒಪಿ–ಮಂನಗರ/ಚುಸಾ(ವಿಸಭಾ)/2018, ದಿನಾಂಕ: 03.05.2018.

**ಆದೇಶ**

ಭಾರತ ಚುನಾವಣಾ ಆಯೋಗದ ಆದೇಶದಂತೆ ರಾಜ್ಯ ವಿಧಾನ ಸಭಾ ಚುನಾವಣೆಯನ್ನು ನಡೆಸುವ ಬಗ್ಗೆ ಉಲ್ಲೇಖ(1)ರ ಪತ್ರದಂತೆ ಚುನಾವಣಾ ವೇಳಾಪಟ್ಟಿಯನ್ನು ಘೋಷಿಸಿರುತ್ತದೆ. ಅದರಂತೆ ಚುನಾವಣೆಯನ್ನು ಮುಕ್ತ ಹಾಗೂ ಶಾಂತಿಯುತವಾಗಿ ನಡೆಸುವ ಬಗ್ಗೆ ಜಿಲ್ಲೆಗೆ ನಿಯೋಜಿತ ಕೇಂದ್ರಿಯ 3 ತುಕಡಿಗಳ ತಾತ್ಕಾಲಿಕ ವಾಸ್ತವ್ಯಕ್ಕಾಗಿ ಈ ಕೆಳಗೆ ಕಾಣಿಸಿರುವ ಶೈಕ್ಷಣಿಕ ಸಂಸ್ಥೆಗಳ ಕಟ್ಟಡಗಳನ್ನು ಅಧಿಗ್ರಹಣ ಮಾಡಿ ಆದೇಶ ಹೊರಡಿಸುವಂತೆ ಪೊಲೀಸ್ ಆಯುಕ್ತರು ಮಂಗಳೂರು ಉಲ್ಲೇಖ(2)ರ ಪತ್ರದಂತೆ ಕೋರಿರುತ್ತಾರೆ.

1. **ಮಹಾತ್ಮಾಗಾಂಧಿ ಶತಾಬ್ದಿ ಶಿಕ್ಷಣ ಸಂಸ್ಥೆ (3ನೇ ಮಹಡಿಯ ವಿಶಾಲ ಕೊಠಡಿ) ಬೊಂದೆಲ್ ಮಂಗಳೂರು**
2. **ಕಪಿತಾನಿಯೋ ಹೈಸ್ಕೂಲ್ ಕಂಕನಾಡಿ ಮಂಗಳೂರು**
3. **ಪದುವ ಕಾಲೇಜು, ನಂತೂರು ಮಂಗಳೂರು**

ಆದುದರಿಂದ ಪೊಲೀಸ್ ಆಯುಕ್ತರು ಮಂಗಳೂರು ಇವರ ಕೋರಿಕೆಯಂತೆ ಜಿಲ್ಲೆಗೆ ನಿಯೋಜಿತ ಕೇಂದ್ರಿಯ 3 ತುಕಡಿಗಳ ತಾತ್ಕಾಲಿಕ ವಾಸ್ತವ್ಯಕ್ಕಾಗಿ ಮೇಲ್ಕಾಣಿಸಿರುವ ಶಿಕ್ಷಣ ಸಂಸ್ಥೆಗಳ ಕಟ್ಟಡಗಳನ್ನು ದಿನಾಂಕ: 03.05.2018 ರಿಂದ 18.05.2018ರ ವರೆಗೆ ಪ್ರಜಾಪ್ರಾತಿನಿಧ್ಯ ಕಾಯಿದೆ 1951ರ ಕಲಂ 160 ರನ್ವಯ ಅಧಿಗ್ರಹಣ ಮಾಡಿ ಪೊಲೀಸ್ ಆಯುಕ್ತರು ಮಂಗಳೂರು ಇವರ ಸ್ವಾಧೀನಕ್ಕೆ ನೀಡಲಾಗಿದೆ.

ಮೇಲ್ಕಾಣಿಸಿರುವ ಶಿಕ್ಷಣ ಸಂಸ್ಥೆಗಳ ಶಾಲಾಭಿವೃದ್ಧಿ ಮಂಡಳಿ /ಮುಖ್ಯೋಪಾಧ್ಯಾಯರು/ ಪ್ರಾಂಶುಪಾಲರು ಸದ್ರಿ ಕಟ್ಟಡದ ಬೀಗದ ಕೀಲಿಯನ್ನು ಪೊಲೀಸ್ ಆಯುಕ್ತರು ಮಂಗಳೂರು ಅಥವಾ ಅವರಿಂದ ಅಧಿಕೃತಗೊಂಡ ಅಧಿಕಾರಿ/ಸಿಬ್ಬಂದಿಯವರಿಗೆ ಕೂಡಲೇ ಹಸ್ತಾಂತರಿಸಿ ಜಿಲ್ಲಾಡಳಿತದೊಂದಿಗೆ ಸಹಕರಿಸುವಂತೆ ತಿಳಿಸಲಾಗಿದೆ.

ಜಿಲ್ಲಾ ಚುನಾವಣಾಧಿಕಾರಿ ಹಾಗೂ
ಜಿಲ್ಲಾಧಿಕಾರಿ
ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು.

ಕರೆಸ್ಪೋಂಡೆಂಟ್ / ಶಾಲಾಭಿವೃದ್ಧಿ ಮಂಡಳಿ / ಪ್ರಾಂಶುಪಾಲರು / ಮುಖ್ಯೋಪಾಧ್ಯಾಯರು
**ಮಹಾತ್ಮಾಗಾಂಧಿ ಶತಾಬ್ದಿ ಶಿಕ್ಷಣ ಸಂಸ್ಥೆ ಬೊಂದೆಲ್ ಮಂಗಳೂರು / ಕಪಿತಾನಿಯೋ ಹೈಸ್ಕೂಲ್ ಕಂಕನಾಡಿ ಮಂಗಳೂರು / ಪದುವ ಕಾಲೇಜು, ನಂತೂರು ಮಂಗಳೂರು**

Scanned by CamScanner

ಸಂಖ್ಯೆ: 193/ಸಿಎಸ್‌ಬಿ/ಸಿಬಿಪಿ-ಮಂನಗರ/ಚು.ಸಾ(ವಿಸಭಾ)/2018

ಪೊಲೀಸ್ ಆಯುಕ್ತರ ಕಛೇರಿ
ಮಂಗಳೂರು ನಗರ
ದಿನಾಂಕ:03-05-2018.

ಇವರಿಗೆ,
ಮಾನ್ಯ ಜಿಲ್ಲಾಧಿಕಾರಿಯವರು ಹಾಗೂ
ಜಿಲ್ಲಾ ಚುನಾವಣಾಧಿಕಾರಿಯವರು,
ದ.ಕ ಜಿಲ್ಲೆ, ಮಂಗಳೂರು.

ಮಾನ್ಯರೇ

ವಿಷಯ: ಕೇಂದ್ರೀಯ ಬಲಗಳ ತಾತ್ಕಾಲಿಕ ವಾಸ್ತವ್ಯ ಪ್ರಯುಕ್ತ ನಗರದ ಮೂರು ಶಿಕ್ಷಣ ಸಂಸ್ಥೆಗಳ ಅಧಿಗ್ರಹಣ ಕುರಿತು.

*************

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಂಗಳೂರು ನಗರಕ್ಕೆ ವಿಧಾನ ಸಭಾ ಚುನಾವಣಾ ಬಂದೋಬಸ್ತ್ ಪ್ರಯುಕ್ತ ದಿನಾಂಕ: 05-05-2018ರಂದು ಬೆಳಗ್ಗೆ ಆಗಮಿಸುವ ಕೇಂದ್ರೀಯ ಪಡೆಗಳ ಮೂರು ತುಕಡಿಗಳ ತಾತ್ಕಾಲಿಕ ವಾಸ್ತವ್ಯದ ಬಗ್ಗೆ ನಗರದ ಮಹಾತ್ಮ ಗಾಂಧಿ ಶತಮಾನೋತ್ಸವ ಶಿಕ್ಷಣ ಸಂಸ್ಥೆ ಬೊಂದೇಲ್ ಇದರ ಮೂರನೇ ಮಹಡಿಯ ವಿಶಾಲ ಕೊಠಡಿ, ನಂತೂರು ಪದವಿನಲ್ಲಿರುವ ಪದುವಾ ಕಾಲೇಜ್ ಶಿಕ್ಷಣ ಸಂಸ್ಥೆ ಹಾಗೂ ಕಪಿತಾನಿಯೂ ಹೈಸ್ಕೂಲ್ (ನಿಯರ್ ಪಂಪುವೆಲ್ ) ಕಟ್ಟಡಗಳನ್ನು ಪೊಲೀಸ್ ಇಲಾಖಾ ವತಿಯಿಂದ ಈಗಾಗಲೇ ಗುರುತಿಸಲಾಗಿರುತ್ತದೆ.

ಈ ನಿಟ್ಟಿನಲ್ಲಿ ಸದ್ರಿ ಮೂರು ಶಿಕ್ಷಣ ಸಂಸ್ಥೆಗಳನ್ನು ಕೇಂದ್ರೀಯ ಬಲಗಳ ತಾತ್ಕಾಲಿಕ ವಾಸ್ತವ್ಯ ಸಂಬಂಧ (ದಿನಾಂಕ; 05-05-2018 ರಿಂದ) ಅಧಿಗ್ರಹಣ ಆದೇಶಕ್ಕಾಗಿ ಈ ಮೂಲಕ ಕೋರಲಾಗಿದೆ.

ತಮ್ಮ ವಿಶ್ವಾಸಿ

3/5

ಪೊಲೀಸ್ ಆಯುಕ್ತರು
ಮಂಗಳೂರು ನಗರ

ಪ್ರತಿಯನ್ನು ಮಾಹಿತಿಗಾಗಿ.
ಉಪ ಪೊಲೀಸ್ ಆಯುಕ್ತರು, ಕಾನೂನು ಮತ್ತು ಸುವ್ಯವಸ್ಥೆ, ಮಂಗಳೂರು ನಗರ.
ಉಪ ಪೊಲೀಸ್ ಆಯುಕ್ತರು, ಅಪರಾಧ ಮತ್ತು ಸಂಚಾರ, ಮಂಗಳೂರು ನಗರ.
ಸಹಾಯಕ ಪೊಲೀಸ್ ಆಯುಕ್ತರು, ಮಂ. ಕೇಂದ್ರ, ದಕ್ಷಿಣ ಮತ್ತು ಉತ್ತರ ಉಪವಿಭಾಗ
ಹಾಗೂ ಸಿಎಆರ್ ಎಸಿಪಿ ರವರಿಗೆ

ಪಿಐ, ನಿಸ್ತಂತು, ಮಂಗಳೂರು ನಗರ, ಇವರಿಗೆ ಶೀಘ್ರ ರವಾನೆಗಾಗಿ.

Scanned by CamScanner

ಕರ್ನಾಟಕ ಸರಕಾರ
(ಕಂದಾಯ ಇಲಾಖೆ)

# ತಾಲೂಕು ಕಛೇರಿ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ

ದೂರವಾಣಿ /ಫ್ಯಾಕ್ಸ್ : 0824/2220596 email : talukmangalore@gmail.com

ನಂಬ್ರ: ಇಎಲ್‌ಎನ್(1)/ಸಿಆರ್223/2017-18 ದಿನಾಂಕ: 17/02/2008

ಇವರಿಗೆ:-
ಸಂಚಾಲಕರು / ಪ್ರಿನ್ಸಿಪಾಲ್
ಪದುವಾ ಶಿಕ್ಷಣ ಸಮೂಹ ಸಂಸ್ಥೆ,
ನಂತೂರು, ಮಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ರಾಜ್ಯ ವಿಧಾನ ಸಭಾ ಸಾರ್ವತ್ರಿಕ ಚುನಾವಣೆ 2018ರ ಬಾಬ್ತು ನಿಮ್ಮ ಶಾಲಾ ಕಟ್ಟಡವನ್ನು ಚುನಾವಣಾ ಕಾರ್ಯಕ್ಕೆ ಅಧಿಗ್ರಹಣ ಮಾಡುವ ಬಗ್ಗೆ.

ಉಲ್ಲೇಖ: ಮಾನ್ಯ ಜಿಲ್ಲಾಧಿಕಾರಿಯವರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನಡವಳಿ ನಂಬ್ರ: ಇಎಲ್‌ಎನ್(1)ಸಿಆರ್/ಟಿ1/ಜಿ1, ದಿನಾಂಕ 01/02/2018.

ಕರ್ನಾಟಕ ರಾಜ್ಯ ವಿಧಾನ ಸಭಾ ಸಾರ್ವತ್ರಿಕ ಚುನಾವಣೆ -2018 - ಮಂಗಳೂರು ತಾಲೂಕಿನ ವ್ಯಾಪ್ತಿಯಲ್ಲಿ ಬರುವ ವಿಧಾನ ಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಚುನಾವಣಾ ಕಾರ್ಯದ ಮಸ್ಟರಿಂಗ್ ಮತ್ತು ಡಿ· ಮಸ್ಟರಿಂಗ್ ಕಾರ್ಯವನ್ನು ನಿಮ್ಮ ಶಾಲಾ ಕಟ್ಟಡದಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

ಪ್ರಜಾ ಪ್ರತಿನಿಧಿ ಕಾಯ್ದೆಯನ್ವಯ ನಿಮ್ಮ ಶಾಲಾ ಕಟ್ಟಡವನ್ನು ಚುನಾವಣಾ ಉದ್ದೇಶಕ್ಕೆ ಅಧಿಗ್ರಹಣ ಮಾಡಲಾಗಿದೆ. ಆದುದರಿಂದ ಚುನಾವಣಾ ಕಾರ್ಯಗಳಿಗೆ ನಿಮ್ಮ ಸಂಪೂರ್ಣ ಸಹಕಾರ ನೀಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಮತದಾರರ ನೋಂದಣಾದಿಕಾರಿ
ಹಾಗೂ ತಹಶೀಲ್ದಾರರು, ಮಂಗಳೂರು ತಾಲೂಕು.
ತಹಶೀಲ್ದಾರರು
ಮಂಗಳೂರು (ದ.ಕ.)

ಪ್ರತಿಯನ್ನು
ಮಾನ್ಯ ಜಿಲ್ಲಾಧಿಕಾರಿಯವರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು - ಇವರ ಅವಗಾಹನೆಗೆ ಸಲ್ಲಿಸಿದೆ.

Scanned by CamScanner

(ಚುನಾವಣೆ–ಅತೀ ಜರೂರು)

ಇವರಿಗೆ
ಪ್ರಾಂಶುಪಾಲರು
ಪಾದುವ ಕಾಲೇಜು
ಮಂಗಳೂರು

ಇವರಿಂದ;
ಪೊಲೀಸ್ ನಿರೀಕ್ಷಕರು
ಮಂಗಳೂರು ಪೂರ್ವ ಪೊಲೀಸ್ ಠಾಣೆ
ಮಂಗಳೂರು

ಮಾನ್ಯರೇ

ವಿಷಯ: ಚುನವಣಾ ಪ್ರಯುಕ್ತ ಬಂದೋಬಸ್ತ್ ಕರ್ತವ್ಯಕ್ಕೆ ಬರುವ ಸಿ.ಆರ್.ಪಿ.ಎಫ್ ಅಧಿಕಾರಿ ಸಿಬ್ಬಂದಿಗಳಿಗೆ ವಾಸ್ತವ್ಯಕ್ಕೆ ಹಾಸ್ಟೇಲನ್ನು ಒದಗಿಸಿ ಕೊಡುವ ಬಗ್ಗೆ

*******

ಈ ಮೇಲಿನ ವಿಷಯದ ಬಗ್ಗೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಮುಂಬರುವ ಕರ್ನಾಟಕ ರಾಜ್ಯದ ವಿಧಾನಸಭಾ ಚುನಾವಣಾ ಪ್ರಯುಕ್ತ ಬಂದೋಬಸ್ತ್ ಕರ್ತವ್ಯಕ್ಕೆ ಬರುವ ಕೇಂದ್ರ ಪ್ಯಾರ ಮಿಲಿಟರಿ ಫೋರ್ಸ್‌ನ ಅಧಿಕಾರಿ ಸಿಬ್ಬಂದಿಗಳಿಗೆ ವಾಸ್ತವ್ಯಕ್ಕೆ ತಮ್ಮ ಕಾಲೇಜಿನ 1 ಹಾಲ್‌ನ್ನು ಒದಗಿಸಿ ಕೊಡುವರೇ ಹಾಗೂ ವಾಸ್ತವ್ಯವಿರುವ ದಿನಗಳಲ್ಲಿ ದೈನಂದಿನ ನೀರು ಪೂರೈಕೆಯ ಬಗ್ಗೆ ಕ್ರಮಕೈಗೊಳ್ಳಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

Police Inspector
East (Kadri) Police Station
Mangalore City

ಮಂಗಳೂರು ಪೂರ್ವ ಪೊಲೀಸ್ ಠಾಣೆ

ದಿನಾಂಕ: 10-04-2018

Scanned by CamScanner

(ಚುನಾವಣೆ–ಅತೀ ಜರೂರು)

ಕರ್ನಾಟಕ ಸರಕಾರ
(ಕಂದಾಯ ಇಲಾಖೆ)

## ತಾಲೂಕು ಕಛೇರಿ ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ

ದೂರವಾಣಿ /ಫ್ಯಾಕ್ಸ್ : 0824–222596 email : tah.mnglr@gmail.com.

ಸಂಖ್ಯೆ: ಇಎಲ್‌ಎನ್(2)/ಸಿಆರ್/1/17–18 ದಿನಾಂಕ: 21/02/2018.

ಇವರಿಗೆ:-
ಪ್ರಾಂಶುಪಾಲರು
ಪಾದುವಾ ಕಾಲೇಜ್ ಆಫ್ ಕಾಮರ್ಸ್ & ಮ್ಯಾನೇಜ್‌ಮೆಂಟ್
ನಂತೂರು
ಮಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭಾ ಸಾರ್ವತ್ರಿಕ ಚುನಾವಣೆ 2018-ತಮ್ಮ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳ ಮಾಹಿತಿ ಒದಗಿಸುವ ಕುರಿತು.

***

ಕರ್ನಾಟಕ ವಿಧಾನ ಸಭಾ ಸಾರ್ವತ್ರಿಕ ಚುನಾವಣೆ 2018ಕ್ಕೆ ಸಂಬಂಧಿಸಿದಂತೆ ಚುನಾವಣಾ ಕರ್ತವ್ಯಕ್ಕೆ ಅಧಿಕಾರಿ/ಸಿಬ್ಬಂದಿಯವರ ವಿವರಗಳನ್ನು ಕ್ರೋಢೀಕರಿಸಲಾಗುತ್ತಿದೆ. ಚುನಾವಣಾ ಕರ್ತವ್ಯಕ್ಕೆ ಗ್ರೂಫ್ 'ಎ' /'ಬಿ'/'ಸಿ' ಮತ್ತು ಗ್ರೂಫ್ 'ಡಿ' ಸಿಬ್ಬಂದಿಗಳ ವಿವರಗಳನ್ನು ಈ ಪತ್ರದೊಂದಿಗೆ ಲಗ್ತೀಕರಿಸಲಾದ ನಮೂನೆಯಲ್ಲಿ ಭರ್ತಿ ಮಾಡಿ Hard Copy ಯೊಂದಿಗೆ ವಿಷಯ ನಿರ್ವಾಹಕರು ದಿನಾಂಕ 26/02/2018ರೊಳಗೆ ಈ ಕಛೇರಿಯ ಚುನಾವಣಾ ಶಾಖೆಗೆ ತಲುಪಿಸುವಂತೆ ಕೋರಲಾಗಿದೆ. ಮತ್ತು Softy Copyಯನ್ನು ಈ ಕಛೇರಿಯ ಮೇಲ್ ಐ.ಡಿ., tah.mnglr@gmail.com.ಇದಕ್ಕೆ ಮೇಲ್ ಮಾಡುವುದು. ಇದು ಚುನಾವಣೆಗೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ ಯಾವುದೇ ರೀತಿಯ ವಿಳಂಬಕ್ಕೆ ಅವಕಾಶ ನೀಡದೆ, ತಕ್ಷಣ ಮಾಹಿತಿಯೊಂದಿಗೆ ಸಹಕರಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ,
ತಹಶೀಲ್ದಾರ್
ತಹಶೀಲ್ದಾರರು,
ಮಂಗಳೂರು ತಾಲೂಕು.

Scanned by CamScanner